ಘಟಿಕ ಛಲದಿ ನಿಂತ ಶ್ರೀ ಹನುಮಂತ ಶ್ರೀ ಹನುಮಂತ
ಘಟಿಕ ಛಲದಿ ನಿಂತ ಪಟು ಹನುಮಂತನು ಪಠನೆಯ ಮಾಡಲು ತ್ಕಟದಿ
ಪೊರೆವೆನೆಂದು ॥
ಚತುರಯುಗದಿ ತಾನು ಅತಿಬಲವಂತನು ಚತುರ್ಮುಖನಯ್ಯನು
ಚತುರಮೂರುತಿಗಳ ಚತುರತನದಿ ಭಜಿಸಿ ಚತುರ್ಮುಖನಾಗಿ ಚತುರ್ವಿದ
ಫಲ ಕೊಡುತ ॥
ಸರಸಿಜ ಭವಗೋಸ್ಕರ ಕಲ್ಮಶ ದೂರ ವರಚಕ್ರತೀರ್ಥಸರ
ಮೆರೆವ ಫಲದಿ ನಿತ್ಯ ನರಹರಿಗೆದುರಾಗಿ ಸ್ಥಿರಯೋಗಾಸನಧಿ ವರವ
ಕೊಡುವೆನೆಂದು ॥
ಶಂಖಚಕ್ರವಧರಿಸಿ ಭಕ್ತರ ಮನವ ಭಿಂಕವ ಪರಿಹರಿಸಿ
ಪಂಕಜನಾಭಶ್ರೀ ಪುರಂದರ ವಿಠಲನು ಭಿಂಕದ ಸೇವಕ ಸಂಕಟ ಕಳೆಯುತ ॥